# All India Radio: Bangalore
# National Bulletin In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

01.05.2026 1.10 p.m.

<><><><>

ಮುಖ್ಯಾಂಶಗಳು

1. ಏಪ್ರಿಲ್‌ನಲ್ಲಿ ಯುಪಿಐ ಶೇಕಡ ೨೫ರಷ್ಟು ಬೆಳವಣಿಗೆ: ರಾಷ್ಟ್ರೀಯ ಪಾವತಿ ನಿಗಮ
2. ಇಂದಿನಿಂದ ಡೀಸೆಲ್ ಮತ್ತು ಎಟಿಎಫ್ ಮೇಲಿನ ರಫ್ತು ಸುಂಕ ಕಡಿತಕ್ಕೆ ಸರ್ಕಾರ ಅಧಿಸೂಚನೆ
3. ಬುದ್ಧನ ಬೋಧನೆಗಳು ೨ ಸಾವಿರದ ೫೦೦ ವರ್ಷಗಳ ನಂತರವೂ ಪ್ರಸ್ತುತ - ಅಮಿತ್ ಶಾ
4. ಐಪಿಎಲ್ ಟಿ-೨೦ ಕ್ರಿಕೆಟ್: ರಾಜಸ್ಥಾನ್ ರಾಯಲ್ಸ್ - ಡೆಲ್ಲಿ ಕ್ಯಾಪಿಟಲ್ಸ್ ತಂಡ ಮುಖಾಮುಖಿ

<><><><>

ಏಪ್ರಿಲ್‌ನಲ್ಲಿ ಯುಪಿಐ ಶೇಕಡ ೨೫ರಷ್ಟು ಬೆಳವಣಿಗೆ ಕಂಡಿದ್ದು, ೨೦೨೭ನೇ ಹಣಕಾಸು ವರ್ಷಕ್ಕೆ ೨೨.೩೫ ಶತಕೋಟಿ ವಹಿವಾಟುಗಳನ್ನು ನಡೆಸುತ್ತಿದೆ. ಭಾರತದ ಡಿಜಿಟಲ್ ಪಾವತಿ ವ್ಯವಸ್ಥೆಯು ಏಪ್ರಿಲ್‌ನಲ್ಲಿ ವರ್ಷದಿಂದ ವರ್ಷಕ್ಕೆ ಶೇಕಡ ೨೫ರಷ್ಟು ಬೆಳವಣಿಗೆ ಕಂಡಿದೆ. ಈ ಅವಧಿಯಲ್ಲಿ ೨೨.೩೫ ಶತಕೋಟಿ ವಹಿವಾಟುಗಳಿಂದ ೨೯.೦೩ ಲಕ್ಷ ಕೋಟಿ ರೂಪಾಯಿಗಳಾಗಿದ್ದು, ಶೇಕಡ ೨೧ರಷ್ಟು ವಾರ್ಷಿಕ ಬೆಳವಣಿಗೆಯಾಗಿದೆ ಎಂದು ರಾಷ್ಟ್ರೀಯ ಪಾವತಿ ನಿಗಮ ಎನ್‌ಪಿಸಿಐ ಇಂದು ಬಿಡುಗಡೆ ಮಾಡಿರುವ ಅಂಕಿಅಂಶಗಳು ತಿಳಿಸಿವೆ. ದೈನಂದಿನ ಆಧಾರದ ಮೇಲೆ, ಸರಾಸರಿ ವಹಿವಾಟುಗಳ ಸಂಖ್ಯೆ ಮಾರ್ಚ್‌ನಲ್ಲಿ ೭೩೦ ಮಿಲಿಯನ್‌ನಿಂದ ಏಪ್ರಿಲ್‌ನಲ್ಲಿ ೭೪೫ ಮಿಲಿಯನ್‌ಗೆ ಗಮನಾರ್ಹ ಏರಿಕೆ ಕಂಡಿದೆ. ಕಳೆದ ತಿಂಗಳು ಸರಾಸರಿ ದೈನಂದಿನ ವಹಿವಾಟು ಮೌಲ್ಯವು ೯೬ ಸಾವಿರದ ೭೬೬ ಕೋಟಿ ರೂಪಾಯಿಗಳಿಗೆ ಏರಿದೆ, ಇದು ಹಿಂದಿನ ತಿಂಗಳಲ್ಲಿ ೯೫ ಸಾವಿರದ ೨೪೩ ಕೋಟಿ ರೂಪಾಯಿಗಳಷ್ಟಿತ್ತು. ೨೦೧೬ರಲ್ಲಿ ಪ್ರಾರಂಭವಾದಾಗಿನಿಂದ ಈ ವರ್ಷದ ಮಾರ್ಚ್‌ನಲ್ಲಿ, ಯುಪಿಐ ತನ್ನ ಅತ್ಯಧಿಕ ಮಾಸಿಕ ವಹಿವಾಟು ಪ್ರಮಾಣವನ್ನು ೨೨.೬೪ ಬಿಲಿಯನ್‌ಗೆ ದಾಖಲಿಸಿದೆ. ಯುಪಿಐ ಈಗ ಯುಎಇ, ಸಿಂಗಾಪುರ, ಭೂತಾನ್, ನೇಪಾಳ, ಶ್ರೀಲಂಕಾ, ಫ್ರಾನ್ಸ್, ಮಾರಿಷಸ್ ಮತ್ತು ಕತಾರ್ ಸೇರಿದಂತೆ ಎಂಟುಕ್ಕೂ ಹೆಚ್ಚು ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ, ಆ ಮೂಲಕ ಭಾರತವನ್ನು ಡಿಜಿಟಲ್ ಪಾವತಿಗಳಲ್ಲಿ ಜಾಗತಿಕ ನಾಯಕನನ್ನಾಗಿ ಮಾಡಿದೆ. ಯುಪಿಐನ ಬೆಳೆಯುತ್ತಿರುವ ಅಂತರರಾಷ್ಟ್ರೀಯ ಅಳವಡಿಕೆಯು ಹಣ ಸಂದಾಯ ಹೆಚ್ಚಿಸುತ್ತಿದೆ, ಆರ್ಥಿಕ ಸ್ಪರ್ಧೆಯನ್ನು ಉತ್ತೇಜಿಸುತ್ತಿದೆ ಮತ್ತು ಜಾಗತಿಕ ಮಟ್ಟದಲ್ಲಿ ಭಾರತದ ಸ್ಥಾನವನ್ನು ಬಲಪಡಿಸುತ್ತಿದೆ. ಭಾರತದ ಪ್ರಮುಖ ಡಿಜಿಟಲ್ ಪಾವತಿ ವೇದಿಕೆಯು

ಕಳೆದ ದಶಕದಲ್ಲಿ ವಹಿವಾಟು ಪ್ರಮಾಣದಲ್ಲಿ ಸುಮಾರು ೧೨ ಸಾವಿರ ಪಟ್ಟು ಅಸಾಧಾರಣ ಏರಿಕೆಯನ್ನು ದಾಖಲಿಸಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

<><><><>

ಡೀಸೆಲ್ ಮತ್ತು ವಾಯುಯಾನ ಟರ್ಬೈನ್ ಇಂಧನ - ಎಟಿಎಫ್ ಮೇಲಿನ ರಫ್ತು ಸುಂಕವನ್ನು ಸರ್ಕಾರ ಕಡಿತಗೊಳಿಸಿದೆ. ಈ ನಿಟ್ಟಿನಲ್ಲಿ, ಕೇಂದ್ರ ಸರ್ಕಾರ ಇಂದಿನಿಂದ ಜಾರಿಗೆ ಬರುವಂತೆ ಅಧಿಸೂಚನೆ ಹೊರಡಿಸಿದೆ. ಹಣಕಾಸು ಸಚಿವಾಲಯದ ಪ್ರಕಟಣೆಯ ಪ್ರಕಾರ, ಡೀಸೆಲ್ ಮೇಲಿನ ರಫ್ತು ಸುಂಕವನ್ನು ಲೀಟರ್‌ಗೆ ೨೩ ರೂಪಾಯಿ ನಿಗದಿಪಡಿಸಲಾಗಿದೆ, ಆದರೆ ವಾಯುಯಾನ ಟರ್ಬೈನ್ ಇಂಧನ-ಎಟಿಎಫ್ ಪ್ರತಿ ಲೀಟರ್‌ಗೆ ೩೩ ರೂಪಾಯಿಗಳ ಸುಂಕವಿದೆ. ಪೆಟ್ರೋಲ್ ಮೇಲೆ ಯಾವುದೇ ರಫ್ತು ಸುಂಕವಿರದೆ ಯಥಾಸ್ಥಿತಿಯಲ್ಲಿರಲಿದೆ.  ಪೆಟ್ರೋಲ್, ಡೀಸೆಲ್ ಮತ್ತು ವಾಯುಯಾನ ಟರ್ಬೈನ್ ಇಂಧನ-ಎಟಿಎಫ್ ರಫ್ತಿನ ಮೇಲೆ ವಿಶೇಷ ಹೆಚ್ಚುವರಿ ಅಬಕಾರಿ ಸುಂಕ ಮತ್ತು ರಸ್ತೆ ಹಾಗೂ ಮೂಲಸೌಕರ್ಯ ಸೆಸ್‌ನಂತಹ ರಫ್ತು ಸುಂಕಗಳನ್ನು ೨೦೨೬ ರ ಮಾರ್ಚ್ ೨೭ರಿಂದ ಜಾರಿಗೆ ಬರುವಂತೆ ಪರಿಚಯಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ರಫ್ತುಗಳನ್ನು ನಿರುತ್ಸಾಹಗೊಳಿಸುವ ಮೂಲಕ ಪೆಟ್ರೋಲಿಯಂ ಉತ್ಪನ್ನಗಳ ದೇಶೀಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಇದನ್ನು ಮಾಡಲಾಗಿದೆ. ದೇಶೀಯ ಬಳಕೆಗಾಗಿ ತೆರವುಗೊಳಿಸಲಾದ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಸ್ತಿತ್ವದಲ್ಲಿರುವ ಅಬಕಾರಿ ಸುಂಕ ದರಗಳಲ್ಲಿ ಯಾವುದೇ ಬದಲಾವಣೆಯಿಲ್ಲ ಎಂದು ಸಚಿವಾಲಯ ತಿಳಿಸಿದೆ.

<><><><>

ಬುದ್ಧ ಪೂರ್ಣಿಮೆ ಅಂಗವಾಗಿ ಇಂದು ಲೇಹ್‌ನ ಜೀವಸ್ಥಳದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಬುದ್ಧನ ಅವಶೇಷಗಳ ಪ್ರದರ್ಶನ ಉದ್ಘಾಟಿಸಿದರು. ಸಮಾರಂಭದಲ್ಲಿ ಲಡಾಖ್‌ನ ಲೆಫ್ಟಿನಂಟ್ ಗವರ್‌ನರ್ ವಿನಯ್ ಕುಮಾರ್ ಸಕ್ಸೇನಾ, ಸಂಸದೆ ಮೊಹಮ್ಮದ್ ಹನೀಫಾ ಹಾಗೂ ಬೌದ್ಧ ಬಿಕ್ಕುಗಳು ಉಪಸ್ಥಿತರಿದ್ದರು.  ಇದೇ ಮೊದಲ ಬಾರಿಗೆ ದೇಶದೊಳಗೆ ಬುದ್ಧನ ಅವಶೇಷಗಳನ್ನು ಅವುಗಳ ಶಾಶ್ವತ ನೆಲೆಯಿಂದ ಹೊರಗೆ ಪ್ರದರ್ಶನ ಮಾಡುತ್ತಿರುವುದಾಗಿದೆ. ೭೫ ವರ್ಷಗಳ ನಂತರ ಈ ಪವಿತ್ರ ಅವಶೇಷಗಳು ಲಡಾಖ್‌ಗೆ ಬಂದಿವೆ. ಬುದ್ಧ ಬೋಧನೆಗಳು ೨೫೦೦ ವರ್ಷಗಳ ನಂತರವೂ ಪ್ರಸ್ತುತವಾಗಿದೆ. ಇದು ಕೇವಲ ಧಾರ್ಮಿಕ ಕಾರ್ಯಕ್ರಮವಲ್ಲ, ಐತಿಹಾಸಿಕ ಪುನರ್ಮಿಲನ ಎಂದು ಸಚಿವ ಅಮಿತ್ ಶಾ ಹೇಳಿದ್ದಾರೆ. ಲಡಾಖ್ ಮತ್ತು ಕಾರ್ಗಿಲ್‌ನಲ್ಲಿ ಮಾತ್ರವಲ್ಲದೆ, ಭಗವಾನ್ ಬುದ್ಧನ ತತ್ವ ಸಿದ್ಧಾಂತಗಳಿಂದ ಇತರ ಧರ್ಮಗಳ ಅನುಯಾಯಿಗಳು ಸಹ ಸ್ಫೂರ್ತಿ ಪಡೆದಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

<><><><>

ಜಗತ್ತಿನಾದ್ಯಂದ ಇಂದು ಬುದ್ಧ ಪೂರ್ಣಿಮೆ ಆಚರಿಸಲಾಗುತ್ತಿದೆ. ಇದು ಗೌತಮ ಬುದ್ಧ ಜನಿಸಿದ ದಿನವನ್ನು ಮಾತ್ರವಲ್ಲದೆ, ಬಿಹಾರದ ಬೋಧ್ ಗಯಾದಲ್ಲಿರುವ ಮಹಾಬೋಧಿ ವೃಕ್ಷದ ಕೆಳಗೆ

ನಿರ್ವಾಣ ಪಡೆದ ದಿನವನ್ನೂ ಸೂಚಿಸುತ್ತದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುದ್ಧ ಪೂರ್ಣಿಮೆ ಹಿನ್ನೆಲೆ ದೇಶದ ನಾಗರಿಕರಿಗೆ ಶುಭಾಶಯಗಳನ್ನು ಕೋರಿದ್ದಾರೆ. ತಮ್ಮ ಸಂದೇಶದಲ್ಲಿ ರಾಷ್ಟ್ರಪತಿಗಳು, ಭಗವಾನ್ ಬುದ್ಧನ ಜನನ, ಜ್ಞಾನೋದಯ ಮತ್ತು ಮಹಾ ಪರಿನಿರ್ವಾಣದಂತಹ ಯುಗ ಪ್ರವರ್ತಕ ಘಟನೆಗಳನ್ನು ಈ ಪವಿತ್ರ ದಿನ ನೆನಪಿಸುತ್ತದೆ. ಬುದ್ಧನ ಶಾಶ್ವತ ಸಂದೇಶಗಳಾದ ಕರುಣೆ, ಅಹಿಂಸೆ, ಶಾಂತಿ ಮತ್ತು ಜ್ಞಾನವು ಇಡೀ ಮಾನವಕುಲಕ್ಕೆ ಸದಾ ದಾರಿದೀಪವಾಗಲಿವೆ ಎಂದು ಹೇಳಿದ್ದಾರೆ. ಬುದ್ಧ ಪೂರ್ಣಿಮೆಯ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಂದು ದೇಶದ ನಾಗರಿಕರಿಗೆ ಶುಭಾಶಯಗಳನ್ನು ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿಯವರು, ಬುದ್ಧನ ಆದರ್ಶಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸರ್ಕಾರದ ಬದ್ಧತೆ ಬಹಳ ಪ್ರಬಲವಾಗಿದೆ ಎಂದು ಹೇಳಿದ್ದಾರೆ. ಬುದ್ಧನ ಚಿಂತನೆಗಳು ಸಮಾಜದಲ್ಲಿ ಸಂತೋಷ ಮತ್ತು ಒಗ್ಗಟ್ಟಿನ ಮನೋಭಾವವನ್ನು ಹೆಚ್ಚಿಸುತ್ತವೆ ಎಂದು ಅವರು ಆಶಿಸಿದ್ದಾರೆ. ಸತ್ಯ, ಅಹಿಂಸೆ ಮತ್ತು ಕರುಣೆಯ ಹಾದಿಯಲ್ಲಿ ಸಾಗುತ್ತಾ ಮಾನವೀಯತೆಯ ಕಲ್ಯಾಣಕ್ಕಾಗಿ ನಿರಂತರವಾಗಿ ಶ್ರಮಿಸಲು ಭಗವಾನ್ ಬುದ್ಧನ ಜೀವನವು ನಮಗೆ ಸ್ಫೂರ್ತಿ ನೀಡುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

<><><><>

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ವಿಶ್ವ ಕಾರ್ಮಿಕ ದಿನದಂದು ದೇಶಾದ್ಯಂತದ ಕಾರ್ಮಿಕರಿಗೆ ಶುಭಾಶಯ ಕೋರಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಅವರು ಸ್ವಾವಲಂಬಿ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವತ್ತ ಭಾರತವನ್ನು ಬಲಪಡಿಸುವಲ್ಲಿ ಕರ್ಮಯೋಗಿಗಳ ಕಠಿಣ ಪರಿಶ್ರಮ, ಸಮರ್ಪಣೆ, ಅಚಲ ಸಂಕಲ್ಪ ಮತ್ತು ಅಮೂಲ್ಯ ಕೊಡುಗೆಗಳ ಬಗ್ಗೆ ಕೊಂಡಾಡಿದ್ದಾರೆ. ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡಲು ಮತ್ತು ಅವರನ್ನು ಸಬಲೀಕರಣಗೊಳಿಸಲು ಸರ್ಕಾರ ಬದ್ಧವಾಗಿದೆ ಎಂದು ರಕ್ಷಣಾ ಸಚಿವರು ಒತ್ತಿ ಹೇಳಿದರು. ನಾಲ್ಕು ಸಮಗ್ರ ಕಾರ್ಮಿಕ ಸಂಹಿತೆಗಳ ಅನುಷ್ಠಾನವು ಉತ್ತಮ ವೇತನ, ವರ್ಧಿತ ರಕ್ಷಣೆ, ಸಾಮಾಜಿಕ ಭದ್ರತೆ ಮತ್ತು ಉದ್ಯೋಗಿಗಳಿಗೆ ಸುಧಾರಿತ ಕಲ್ಯಾಣವನ್ನು ಖಚಿತಪಡಿಸಿದೆ ಎಂದು ಅವರು ತಿಳಿಸಿದ್ದಾರೆ.

<><><><>

ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ - ಎನ್‌ಸಿಬಿ ಪ್ರಮುಖ ಅಂತಾರಾಷ್ಟ್ರೀಯ ಮಾದಕ ದ್ರವ್ಯ ಜಾಲವನ್ನು ಭೇದಿಸಿ ಮುಂಬೈನಲ್ಲಿ ಒಂದು ಸಾವಿರದ ೭೪೫ ಕೋಟಿ ರೂಪಾಯಿ ಮೌಲ್ಯದ ೩೪೯ ಕೆಜಿಗಳಷ್ಟು ಕೊಕೇನ್ ವಶಪಡಿಸಿಕೊಂಡಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು ಎನ್‌ಸಿಬಿ ತಂಡವನ್ನು ಅಭಿನಂದಿಸಿ, ಮಾದಕ ದ್ರವ್ಯಗಳ ದಂಧೆಯನ್ನು ಹತ್ತಿಕ್ಕಲು ಸರ್ಕಾರ ನಿರ್ಧರಿಸಿದೆ ಎಂದು ತಿಳಿಸಿದ್ದಾರೆ.

<><><><>

ಕರ್ನಾಟಕ, ಕೇರಳ, ತಮಿಳುನಾಡು, ಪುದುಚೇರಿ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ ಮತ್ತು ತ್ರಿಪುರ, ಪಶ್ಚಿಮ ಬಂಗಾಳ ಮತ್ತು ಸಿಕ್ಕಿಂನ ಪ್ರತ್ಯೇಕ ಸ್ಥಳಗಳಲ್ಲಿ ಇಂದು ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ನಡುವೆ, ವಿದರ್ಭದ ಪ್ರತ್ಯೇಕ ಸ್ಥಳಗಳಲ್ಲಿ ಉಷ್ಣ ಅಲೆಯ ಪರಿಸ್ಥಿತಿ ಇರುವುದಾಗಿ ಹವಾಮಾನ ಸಂಸ್ಥೆ ಮುನ್ಸೂಚನೆ ನೀಡಿದೆ. ಆಂಧ್ರಪ್ರದೇಶ, ಒಡಿಶಾ, ತಮಿಳುನಾಡು ಮತ್ತು ಪುದುಚೇರಿಯ ಪ್ರತ್ಯೇಕ ಸ್ಥಳಗಳಲ್ಲಿ ಬಿಸಿ ಮತ್ತು ತೇವಾಂಶದಿಂದ ಕೂಡಿದ ವಾತಾವರಣ ಇರಲಿದೆ ಎಂದು ಐಎಂಡಿ ಹೇಳಿದೆ.

<><><><>

ಜೈಪುರದ ಸವಾಯ್ ಮಾನ್ಸಿಂಗ್ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡ ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ. ಪ್ರಸ್ತುತ, ರಾಜಸ್ಥಾನ ರಾಯಲ್ಸ್ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದ್ದರೆ, ಡೆಲ್ಲಿ ಕ್ಯಾಪಿಟಲ್ಸ್ ಏಳನೇ ಸ್ಥಾನದಲ್ಲಿದೆ.

<><><><>

ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಬ್ಯಾಟಿಂಗ್ ಮಾಂತ್ರಿಕ ವಿರಾಟ್ ಕೊಹ್ಲಿ ದಾಖಲೆ ಬರೆದಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರಿನ ಆಟಗಾರ ವಿರಾಟ್ ಕೊಹ್ಲಿ ಭಾರತದಲ್ಲಿ ೮ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಐಪಿಎಲ್ ರನ್ ಗಳಿಸಿದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ನಿನ್ನೆ ಅಹಮದಾಬಾದ್‌ನಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧದ ಐಪಿಎಲ್ ಟಿ೨೦ ಕ್ರಿಕೆಟ್ ಪಂದ್ಯದ ಸಂದರ್ಭದಲ್ಲಿ ಅವರು ಈ ಸಾಧನೆ ದಾಖಲಿಸಿದ್ದಾರೆ.

<><><><>

ಸುಮಾರು ೧೪ ಮಿಲಿಯನ್ ಡಾಲರ್ ಮೌಲ್ಯದ ೬೫೭ ಪ್ರಾಚೀನ ವಸ್ತುಗಳನ್ನು ಅಮೆರಿಕ ಭಾರತಕ್ಕೆ ಹಿಂದಿರುಗಿಸಿದೆ. ಮ್ಯಾನ್‌ಹ್ಯಾಟನ್ ಜಿಲ್ಲಾ ವಕೀಲ ಆಲ್ವಿನ್ ಬ್ರಾಗ್ ಅವರು ಈ ವಾಪಸಾತಿ ಘೋಷಿಸಿದರು. ನ್ಯೂಯಾರ್ಕ್‌ನಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್‌ನ ಕಾನ್ಸುಲ್ ರಾಜಲಕ್ಷ್ಮಿ ಕದಮ್ ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಈ ತುಣುಕುಗಳನ್ನು ಹಿಂದಿರುಗಿಸಲಾಯಿತು. ಕಳ್ಳಸಾಗಣೆ ಜಾಲಗಳ ಕುರಿತು ಹಲವಾರು ತನಿಖೆಗಳ ನಂತರ ಈ ಪ್ರಾಚೀನ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ೬೦೦ಕ್ಕೂ ಹೆಚ್ಚು ಪ್ರಾಚೀನ ವಸ್ತುಗಳನ್ನು ಹಿಂದಿರುಗಿಸುವುದರಿಂದ ಭಾರತದಲ್ಲಿ ಸಾಂಸ್ಕೃತಿಕ ಪರಂಪರೆಯನ್ನು ಗುರಿಯಾಗಿಸಿಕೊಂಡ ಕಳ್ಳಸಾಗಣೆ ಜಾಲಗಳ ಪ್ರಮಾಣವು ದೊಡ್ಡದಾಗಿದೆ ಎಂದು ಬ್ರಾಗ್ ತಿಳಿಸಿದ್ದಾರೆ. ಕದ್ದ ಕಲಾಕೃತಿಗಳನ್ನು ಭಾರತಕ್ಕೆ ಹಿಂದಿರುಗಿಸಲು ಇನ್ನೂ ಹೆಚ್ಚಿನ ಕೆಲಸ ಮಾಡಬೇಕಾಗಿದೆ ಎಂದು ಅವರು ಹೇಳಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>